# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 718 (778) |
| ಮಾನ್ಯ ಸದಸ್ಯರ ಹೆಸರು | ಶ್ರೀ ವಿನಯ್ ಕಾರ್ತಿಕ್ ಪ್ರಕಾಶ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21/08/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನಲ್ಲಿ, ಪ್ರಸ್ತುತ ನೋಂದಾಯಿತ "ಗಿಗ್ ವರ್ಕರ್" ಗಳ ಸಂಖ್ಯೆ ಎಷ್ಟು: ಮತ್ತು ನೋಂದಾಯಿತ 'ಸರ್ವೀಸ್ ಪ್ರುವೈಡರ್ಸ್' ಕಂಪನಿಗಳ ಸಂಖ್ಯೆ ಎಷ್ಟು ಹಾಗೂ ಸದರಿ ನೋಂದಾಯಿತ ಗಿಗ್ ವರ್ಕರ್ ಗಳಲ್ಲಿ ಕರ್ನಾಟಕ ಮೂಲದವರ ಸಂಖ್ಯೆ ಎಷ್ಟು ಮತ್ತು ಹೊರರಾಜ್ಯದವರ ಸಂಖ್ಯೆ ಎಷ್ಟು: | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಅದರಲ್ಲಿ, ಗಿಗ್ ಕಾರ್ಮಿಕರಿಗೆ ವಿಮಾ ಯೋಜನೆ ಒದಗಿಸುವ "ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ" ಯನ್ನು ಜಾರಿಗೊಳಿಸಲಾಗಿದ್ದು, ಈ ಯೋಜನೆಯಡಿ ಇ-ಶ್ರಮ್ ಪೋರ್ಟಲ್ ನಲ್ಲಿ ಒಟ್ಟು: **30256** ನೋಂದಾಯಿತರಾಗಿದ್ದು ಬೆಂಗಳೂರಿನಲ್ಲಿ ಪ್ರಸ್ತುತ ನೋಂದಾಯಿತ ಗಿಗ್ ವರ್ಕರ್ ಗಳ ಸಂಖ್ಯೆ: **10815** ಹಾಗೂ ಕರ್ನಾಟಕ ಮೂಲದವರು ಒಟ್ಟು **28786** ಹಾಗೂ ಹೊರ ರಾಜ್ಯದವರು ಒಟ್ಟು **1470** ನೋಂದಾಯಿಸಿಕೊಂಡಿರುತ್ತಾರೆ.<br><br>ಮುಂದುವರೆದು, ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧಿನಿಯಮ 2025 ದಿನಾಂಕ: 30-05-2025 ರಂದು ಜಾರಿಗೆ ಬಂದಿರುತ್ತದೆ. ಸದರಿ ಕಾಯ್ದೆಯಡಿ ಈವರೆಗೆ ಒಟ್ಟು 14 ಅಗ್ರಿಗೇಟರ್‌ಗಳು (Service Providers) ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿಯಲ್ಲಿ ನೋಂದಾಯಿಸಿಕೊಂಡಿರುತ್ತಾರೆ. |
| ಆ) | ಕಳೆದ 3 ವರ್ಷಗಳಲ್ಲಿ, ನಿಗದಿತ ಅವಧಿಯೊಳಗೆ ಮತ್ತು ತ್ವರಿತವಾಗಿ ವಿತರಣೆ ಮಾಡುವ ಧಾವಂತದಲ್ಲಿ ಅಪಘಾತಕ್ಕೊಳಗಾಗಿ ಮರಣ ಹೊಂದಿದ ಮತ್ತು ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದ 'ಗಿಗ್ ವರ್ಕರ್ 'ಗಳ ಸಂಖ್ಯೆ ಎಷ್ಟು; ಅವರಿಗೆ ನೀಡಿರುವ ಪರಿಹಾರದ ವಿವರಗಳೇನು, (ವರ್ಷವಾರು ವಿವರಗಳನ್ನು ನೀಡುವುದು) | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆಯಡಿ ಗಿಗ್ ಕಾರ್ಮಿಕರು ನೋಂದಾಯಿಸಿಕೊಳ್ಳುವ ಮೂಲಕ ತಲಾ ರೂ. 2.00 ಲಕ್ಷಗಳ ಅಪಘಾತ ಪರಿಹಾರ ಹಾಗೂ ಜೀವ ವಿಮಾ ಸೌಲಭ್ಯ ಸೇರಿದಂತೆ ಒಟ್ಟು ರೂ. 4.00 ಲಕ್ಷಗಳ ವಿಮಾ ಸೌಲಭ್ಯ ಪಡೆಯಬಹುದಾಗಿದ್ದು,<br><br>ಈವರೆಗೆ ಮಂಡಳಿಗೆ 7 ಪ್ರಕರಣಗಳು ದಾಖಲಾಗಿದ್ದು, ಈ ಕೆಳಕಂಡಂತೆ ಪರಿಹಾರ ಒದಗಿಸಲಾಗಿರುತ್ತದೆ. |

| ಕ್ರಮ ಸಂಖ್ಯೆ | ಜಿಲ್ಲೆ | ಫಲಾನುಭವಿಗಳ ಸಂಖ್ಯೆ | | | | ಪರಿಹಾರ ಮೊತ್ತ |
|---|---|---|---|---|---|---|
| | | 2024-25 | | 2025-26 | | |
| | | ಮರಣ ಪರಿಹಾರ | ವೈದ್ಯಕೀಯ ವೆಚ್ಚ | ಮರಣ ಪರಿಹಾರ | ವೈದ್ಯಕೀಯ ವೆಚ್ಚ | |
| 1 | ಬೆಳಗಾವಿ | 0 | 0 | 0 | 1 | 1 ಲಕ್ಷ |
| 2 | ಚಿಕ್ಕಮಗಳೂರು | 0 | 0 | 0 | 2 | 2 ಲಕ್ಷ |
| 3 | ದಕ್ಷಿಣ ಕನ್ನಡ | 0 | 0 | 0 | 1 | 19043/- |
| `4 | ಕೊಡಗು | 0 | 0 | 0 | 1 | 60384/- |
| 5 | ಮಂಗಳೂರು | 1 | 0 | 0 | 0 | 4 ಲಕ್ಷ |
| 6 | ಉತ್ತರ ಕನ್ನಡ | 0 | 0 | 1 | 0 | 4 ಲಕ್ಷ |
| **ಒಟ್ಟು** | | **1** | **0** | **1** | **5** | **1179427** |

ಇ) "ಗಿಗ್ ವರ್ಕರ್ಸ್" ಗಳ ನೋಂದಣಿಗೆ ಇರುವ ನಿಯಮ ಮತ್ತು ಮಾನದಂಡಗಳೇನು, ಹಾಗೂ ಸರ್ಕಾರದಿಂದ ಮತ್ತು "ಸರ್ವೀಸ್ ಪ್ರುವೈಡರ್ಸ್" ಕಂಪನಿಗಳಿಂದ 'ಗಿಗ್ ವರ್ಕರ್ಸ್' ಗಳ ಕಲ್ಯಾಣಕ್ಕಾಗಿ ದೊರೆಯುತ್ತಿರುವ ನೆರವು ಹಾಗೂ ಸವಲತ್ತುಗಳೇನು;

ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆಯಡಿ ಸ್ವಿಗ್ಗಿ, ಜೊಮ್ಯಾಟೋಗಳಂತಹ ಸಂಸ್ಥೆಗಳಲ್ಲಿ ಫುಡ್ ಡೆಲಿವರಿ ಮಾಡುವ ಹಾಗೂ ಇ-ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಪ್ ಕಾರ್ಟ್, ಬಿಗ್ ಬಾಸ್ಕೆಟ್, ಪೋರ್ಟರ್, ಫಾರ್ಮಸಿ, ಬ್ಲಿಂಕಿಟ್, ಜೆಪ್ಟೋ, ಡಾಮಿನೋಸ್ ಮುಂತಾದ ಸಂಸ್ಥೆಗಳಲ್ಲಿ ಡೆಲಿವರಿ ವೃತ್ತಿಯಲ್ಲಿ ತೊಡಗಿಕೊಂಡ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರನ್ನು ಸೇವಾಸಿಂಧು ಪೋರ್ಟಲ್ ಮೂಲಕ ಉಚಿತವಾಗಿ ನೋಂದಾಯಿಸಿ ಗುರುತಿನ ಚೀಟಿ ನೀಡಲಾಗುತ್ತಿದೆ.

**ಒದಗಿಸುತ್ತಿರುವ ಸೌಲಭ್ಯಗಳು:**

**ಅ)** ಅಪಘಾದಿಂದ ಮರಣ ಹೊಂದಿದಲ್ಲಿ ವಿಮಾ ಪರಿಹಾರ ರೂ 2.00 ಲಕ್ಷ ಹಾಗೂ ಜೀವ ವಿಮೆ ರೂ 2.00 ಲಕ್ಷ ಸೇರಿ ಒಟ್ಟು ರೂ. 4.00 ಲಕ್ಷಗಳು.

1. ಅಪಘಾದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ. 2.00 ಲಕ್ಷಗಳವರೆಗೆ
2. ಆಸ್ಪತ್ರೆ ವೆಚ್ಚ ಮರುಪಾವತಿ ರೂ.1.00 ಲಕ್ಷಗಳವರೆಗೆ (ಅಪಘಾತ ಪ್ರಕರಣಗಳಿಗೆ ಮಾತ್ರ).

**ಆ)** ಜೀವ ವಿಮಾ ರೂ.2.00 ಲಕ್ಷಗಳು.

**ಅರ್ಹತೆ/ಮಾನದಂಡಗಳು:**

1) ಅರ್ಜಿದಾರರು 18 ರಿಂದ 60 ವರ್ಷ ವಯಸ್ಸಿನವರಾಗಿರಬೇಕು.
2) ಆದಾಯ ತೆರಿಗೆ ಪಾವತಿದಾರರಾಗಿರಬಾರದು.

| | | |
|---|---|---|
| | | 3) ಇ-ಶ್ರಮ್ ಮತ್ತು ಇ.ಪಿ.ಎಫ್. ಸೌಲಭ್ಯ ಹೊಂದಿರಬಾರದು.<br>4) ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರು ರಾಜ್ಯ ಸರ್ಕಾರದ ಸಹಾಯದಿಂದ ನೋಂದಣಿಯಾಗುವಂತೆ ಮಾಡಲು, ಎಲ್ಲಾ ಜಿಲ್ಲೆಗಳಿಗೆ ಸೇರಿಸಿ ಗುರುವಿನ ಯೋಜನೆ ರೂಪಿಸಲಾಗುವುದು.<br>5) ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ ನೋಂದಣಿ ವ್ಯವಸ್ಥೆ ಮಾಡಲಾಗುತ್ತದೆ.<br><br>ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧಿನಿಯಮ 2025 ರಡಿ "ಸರ್ವೀಸ್ ಪ್ರೊವೈಡರ್ಸ್' ಕಂಪನಿಗಳಿಂದ 'ಗಿಗ್ ವರ್ಕರ್' ಗಳ ಕಲ್ಯಾಣಕ್ಕಾಗಿ ದೊರೆಯುತ್ತಿರುವ ನೆರವು ಹಾಗೂ ಸವಲತ್ತುಗಳನ್ನು ನೀಡುವುದಾಗಿ ತಿಳಿಸಿದ್ದು, ಈ ಬಗ್ಗೆ ಸರ್ಕಾರಕ್ಕೆ ಅಧಿಕೃತ ಮಾಹಿತಿ ಇರುವುದಿಲ್ಲ. |
| ಈ) | ರಾಜ್ಯದಲ್ಲಿರುವ ಎಲ್ಲಾ 'ಗಿಗ್ ವರ್ಕರ್' ಗಳಿಗೆ ವಾಹನ ವಿಮೆ, ಜೀವ ವಿಮೆ ಹಾಗೂ ಅವರುಗಳ ಕಲ್ಯಾಣಕ್ಕಾಗಿ ಮತ್ತು ಸಾಮಾಜಿಕ ಭದ್ರತೆಗಾಗಿ 'ಸರ್ವೀಸ್ ಪ್ರೊವೈಡರ್ಸ್' ಕಂಪನಿಗಳು ಹಾಗೂ ಸರ್ಕಾರದಿಂದ ದೊರೆಯುತ್ತಿರುವ ವಿಶೇಷ ಸವಲತ್ತುಗಳೇನು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಅದರಲ್ಲಿ, ಗಿಗ್ ಕಾರ್ಮಿಕರಿಗೆ ವಿಮಾ ಯೋಜನೆ ಒದಗಿಸುವ "ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ" ಯನ್ನು ಜಾರಿಗೊಳಿಸಲಾಗಿದೆ.<br><br>ಸರ್ವೀಸ್ ಪ್ರೊವೈಡರ್ಸ್' ಕಂಪನಿಗಳು ಜೀವ ವಿಮೆ ಹಾಗೂ ಇನ್ನಿತರ ಯೋಜನೆಗಳನ್ನು ನೀಡುವುದಾಗಿ ತಿಳಿಸಿದ್ದು, ಈವರೆಗೆ ಸರ್ಕಾರಕ್ಕೆ ಈ ಯೋಜನೆಗಳನ್ನು ನೀಡಿರುವುದರ ಬಗ್ಗೆ ಅಧಿಕೃತ ಮಾಹಿತಿ ಇರುವುದಿಲ್ಲ. |
| ಉ) | ಹೊಟ್ಟೆಪಾಡಿಗಾಗಿ ಹಾಗೂ ಕುಟುಂಬ ನಿರ್ವಹಣೆಯ ಅನಿವಾರ್ಯತೆಯಿಂದ ಹಲವಾರು ವಿಶೇಷ ಚೇತನರು ಹಾಗೂ ಚಿಕ್ಕ ವಯಸ್ಸಿನ ಮಕ್ಕಳನ್ನು ಹೊಂದಿರುವ ತಾಯಂದಿರು ಕೂಡ 'ಗಿಗ್ ವರ್ಕರ್ 'ಗಳಾಗಿ ಸೇವೆ ನೀಡುತ್ತಿದ್ದು, ಅವರುಗಳು ಕರ್ತವ್ಯ ನಿರ್ವಹಣೆಯ ವೇಳೆಯಲ್ಲಿ ಹಲವು ರೀತಿಯ ಸವಾಲುಗಳನ್ನು ನಿರಂತರವಾಗಿ ಎದುರಿಸುತ್ತಿದ್ದು, ಅವುಗಳ ಪರಿಹಾರಕ್ಕೆ 'ಸರ್ವೀಸ್ ಪ್ರೊವೈಡರ್ಸ್' ಕಂಪನಿಗಳು ಮತ್ತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಹೊಟ್ಟೆಪಾಡಿಗಾಗಿ ಹಾಗೂ ಕುಟುಂಬ ನಿರ್ವಹಣೆಯ ಅನಿವಾರ್ಯತೆಯಿಂದ ಹಲವಾರು ವಿಶೇಷ ಚೇತನರು ಹಾಗೂ ಚಿಕ್ಕ ವಯಸ್ಸಿನ ಮಕ್ಕಳನ್ನು ಹೊಂದಿರುವ ತಾಯಂದಿರು ಕೂಡ 'ಗಿಗ್ ವರ್ಕರ್ 'ಗಳಾಗಿ ಸೇವೆ ನೀಡುತ್ತಿದ್ದು, ಸರ್ವೀಸ್ ಪ್ರೊವೈಡರ್ಸ್' ಕಂಪನಿಗಳು ಪರಿಹಾರ ನೀಡುವ ಬಗ್ಗೆ ತಿಳಿಸಿರುತ್ತಾರೆ, ಈವರೆಗೆ ಸರ್ಕಾರಕ್ಕೆ ಈ ಪರಿಹಾರ ನೀಡಿರುವುದರ ಬಗ್ಗೆ ಅಧಿಕೃತ ಮಾಹಿತಿ ಇರುವುದಿಲ್ಲ.<br><br>ಮುಂದುವರೆದು, ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ನಿಯಮ, 2025 ರಲ್ಲಿ ನ ನಿಯಮ 15 ರ ಉಪನಿಯಮ 7 ರಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಪ್ರಾವಧಾನವನ್ನು ಕಲ್ಪಿಸಲಾಗಿದೆ.<br><br>1. ಜೀವ ವಿಮೆ<br>2. ಅಪಘಾತ ಪರಿಹಾರ ಸೌಲಭ್ಯ<br>3. ಅಂಗವೈಕಲ್ಯ ಪರಿಹಾರ ಸೌಲಭ್ಯ<br>4. ವೈದ್ಯಕೀಯ ಸೌಲಭ್ಯ<br>5. ಹೆರಿಗೆ ಭತ್ಯೆ<br>6. ವೃದ್ಧಾಪ್ಯ ಸಂರಕ್ಷಣೆ |

| | | |
|---|---|---|
| ಊ) | ಕರ್ತವ್ಯ ನಿರ್ವಹಣೆಯ ಅವಧಿಯಲ್ಲಿ 'ಗಿಗ್ ವರ್ಕರ್ಸ್'ಗಳಿಗೆ ಶೌಚಾಲಯ ಬಳಕೆಯ ಸೌಲಭ್ಯ ಮತ್ತು ವಿಶ್ರಾಂತಿ ಪಡೆಯಲು ಸೂಕ್ತ ವ್ಯವಸ್ಥೆಗಳನ್ನು 'ಸರ್ವೀಸ್ ಪ್ರೊವೈಡರ್ಸ್' ಕಂಪನಿಗಳು ಕಲ್ಪಿಸಿವೆಯೇ; ಇದುವರೆಗೆ ಕಲ್ಪಿಸದೇ ಇದ್ದಲ್ಲಿ 'ಗಿಗ್ ವರ್ಕರ್' ಗಳಿಗೆ ಈ ಸೌಲಭ್ಯ ಕಲ್ಪಿಸಲು ಯಾವ ಕಾಲಮಿತಿಯೊಳಗೆ ಅಗತ್ಯ ಕ್ರಮವಹಿಸಲಾಗುವುದು? | Amazon ಅಂತಹ Aggregators ಗಳು ಈ ಕೆಳಕಂಡ ಸೌಲಭ್ಯಗಳನ್ನು ನೀಡುತ್ತಿರುವುದಾಗಿ ತಿಳಿಸಿರುತ್ತಾರೆ.<br>• Ashray Centers<br>• Industry-leading insurance coverage<br>• Enhanced safety features such as vehicle health checks and complimentary ambulance services<br>• Cold water stations and air-conditioned seating areas within building<br><br>ಗಿಗ್ ವರ್ಕರ್ ಗಳಿಗೆ ಈ ಸೌಲಭ್ಯ ಕಲ್ಪಿಸಲು "ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ)" ಕಾಯ್ದೆ 2025 ರಡಿ ಸೆಕ್ಷನ್ 16 ಮತ್ತು 18 ರಲ್ಲಿ ತಿಳಿಸಿರುವಂತೆ, ಯುಕ್ತ ಕೆಲಸದ ಸ್ಥಿತಿಗಳು ಮತ್ತು ವಿಚಾರಣೆಗಳಿಗಾಗಿ ಸಂಕರ್ಪ ಕೇಂದ್ರದ ನಾಮ ನಿರ್ದೇಶನ ಕಾಯ್ದೆಯಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.<br>ಈ ಸೌಲಭ್ಯ ಕಲ್ಪಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ. |

**ಕಾಇ 455 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್ )**
**ಕಾರ್ಮಿಕ ಸಚಿವರು**